ಆ) ರಾಜ್ಯಾದ್ಯಂತ ಮನೆ ಮನೆ ಸಮೀಕ್ಷೆಯನ್ನು ಕೈಗೊಂಡು ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗನುಗುಣವಾಗಿ ಅನ್ನಪೂರ್ಣ, ಅಂತ್ಯೋದಯ ಅನ್ನ, ಅಕ್ಷಯ, ಎಪಿಎಲ್ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಣೆ ಮಾಡಿದ ನಂತರ, ಪಡಿತರ ಚೀಟಿ ಪಡೆಯಲು ವಂಚಿತರಾದವರು / ಲೋಪದೋಷಗಳ ಬಗ್ಗೆ ಅಹವಾಲುಗಳನ್ನು ಸ್ವೀಕರಿಸಲಾಗಿದೆ ಸದರಿ ಅಹವಾಲುಗಳನ್ನು ಪರಿಶೀಲಿಸಿ ಅರ್ಹತೆಗೆ ಅನುಗುಣವಾಗಿ ಪಡಿತರ ಚೀಟಿ ವಿತರಣೆಗೆ ಕ್ರಮ ವಹಿಸಲಾಗುತ್ತಿದೆ

ಇ) ಇಲ್ಲ

ಈ) ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಅಹವಾಲುಗಳ ಪೂರ್ಣ ವಿಲೇವಾರಿಯ ನಂತರ ತಾತ್ಕಾಲಿಕ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ಪೂರೈಸಲು ಕನಿಷ್ಠ 6 ತಿಂಗಳ ಕಾಲಾವಕಾಶ ಬೇಕಿರುತ್ತದೆ

663 (1137) ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ) – ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಸಿಂಧಗಿ ವಿಧಾನಸಭಾ ಕ್ಷೇತ್ರದಲ್ಲಿ ತೋಟಗಾರಿಕಾ ಇಲಾಖಾ ವತಿಯಿಂದ ವಿವಿಧ ಯೋಜನೆಯಡಿ ಮಂಜೂರಾಗಿರುವ ಹಣ ಎಷ್ಟು , (ಯೋಜನೆವಾರು ವಿವರ ನೀಡುವುದು) ,

ಆ) ಈ ಯೋಜನೆಯಡಿ ಕೈಗೊಂಡಿರುವ ಕಾರ್ಯಕ್ರಮಗಳಾವುವು , (ವಿವರ ನೀಡುವುದು) ,

ಇ) ಈ ಕಾರ್ಯಕ್ರಮಗಳು ಯಾವ ಹಂತದಲ್ಲಿವೆ , ಯಾವಾಗ ಮುಕ್ತಾಯಗೊಳ್ಳಲಿದೆ ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕೆ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ಸಿಂಧಗಿ ತಾಲ್ಲೂಕಿಗೆ ಒಟ್ಟು ರೂ 159 246 ಲಕ್ಷ ಅನುದಾನ ಬಿಡುಗಡೆಯಾಗಿದೆ

ಯೋಜನಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ

1 ತೆಂಗು ಬೀಜ ಸಂಗ್ರಹಣೆ
2 ಪ್ರಚಾರ ಮತ್ತು ಸಾಹಿತ್ಯ
3 ತೋಟಗಾರಿಕೆ ಕ್ಷೇತ್ರ ಮೂಲ ಸೌಕರ್ಯದ ಅಭಿವೃದ್ಧಿ
4 ಉಷ್ಣ ಮತ್ತು ಶುಷ್ಕ ವಲಯದ ಹಣ್ಣುಗಳ ಅಭಿವೃದ್ಧಿ
5 ಹನಿ ನೀರಾವರಿ
6 ಪ್ರಕೃತಿ ವಿಕೋಪ ಪರಿಹಾರ ಯೋಜನೆ
7 ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ
8 ಅಲಂಕಾರಿಕ ಗಿಡಗಳ ಅಭಿವೃದ್ಧಿ
9 ಮಂಡಲ ಮಟ್ಟದ ನರ್ಸರಿ ಅಭಿವೃದ್ಧಿ
10 ಸಾಮಾಜಿಕ ತೋಟಗಾರಿಕೆ
11 ಸಸ್ಯ ಸಂರಕ್ಷಣಾ ಸಹಾಯಧನ
12 ವಿಶೇಷ ಘಟಕ ಯೋಜನೆ (ರಾಜ್ಯ)
13 ಗಿರಿಜನ ಉಪಯೋಜನೆ (ರಾಜ್ಯ)
14 ವಿಶೇಷ ಕೇಂದ್ರೀಯ ಅನುದಾನ

ಇ) ಈ ಕಾರ್ಯಕ್ರಮಗಳು ಆಯಾ ಋತುಮಾನಗಳಲ್ಲಿ ಜಾರಿಗೊಂಡು ಸಂಬಂಧಿತ ಆರ್ಥಿಕ ವರ್ಷದಲ್ಲಿ ಮುಕ್ತಾಯಗೊಳ್ಳಲಿವೆ

ಅನುಬಂಧ–1

ವಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕಿನ 2003–04, 04–05 ಮತ್ತು 2005–06ನೇ ಸಾಲಿನ ಯೋಜನಾವಾರು ಮಂಜೂರಾಗಿರುವ ಹಣದ ವಿವರ

(ರೂ ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆಗಳು	ವಾರ್ಷಿಕ ಅನುದಾನ			
		2003–04	2004–05	2005–06	ಒಟ್ಟು
1	ಬೀಜದ ತೆಂಗು ಸಂಗ್ರಹಣೆ	0 050	0 532	0 473	1 055
2	ತೋಟಗಾರಿಕೆ ಬೆಳೆಗಳ ಪ್ರಚಾರ	0 430	0 000	0 100	0 530

3	ಕೃಷಿ ಮೂಲಭೂತ ಸೌಕರ್ಯ	0 500	2 000	2 000	4 500
4	ಉಷ್ಣ ಮತ್ತು ಶುಷ್ಕ ವಲಯ	4 600	23 950	5 160	33 710
5	ಕೇಂದ್ರವಲಯ ಹನಿ ನೀರಾವರಿ	51 420	10 000	44 300	105 720
6	ಪ್ರಕೃತಿ ವಿಕೋಪ ಯೋಜನೆ	0 000	6 000	0 000	6 000
7	ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ	0 270	1 000	1 250	2 520
8	ಅಲಂಕಾರಿಕ ಗಿಡಗಳ ಅಭಿವೃದ್ಧಿ	0 060	0 000	0 000	0 060
9	ಮಂಡಲ ಮಟ್ಟದ ನರ್ಸರಿ ಅಭಿವೃದ್ಧಿ	0 450	0 600	0 600	1 650
10	ಸಾಮಾಜಿಕ ತೋಟಗಾರಿಕೆ	0 040	0 040	0 010	0 090
11	ಸಸ್ಯ ಸಂರಕ್ಷಣಾ ಸಹಾಯಧನ	0 310	0 500	0 000	0 810
12	ವಿಶೇಷ ಘಟಕ ಯೋಜನೆ (ರಾಜ್ಯ)	0 106	0 000	0 195	0 301
13	ಗಿರಿಜನ ಉಪಯೋಜನೆ (ರಾಜ್ಯ)	0 060	0 000	0 060	0 120
14	ವಿಶೇಷ ಕೇಂದ್ರೀಯ ಅನುದಾನ	2 180	0 000	0 000	2 180
	ಒಟ್ಟು	**60 476**	**44 622**	**54 148**	**159 246**